# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಪ್ರೇಮ ಅಧ್ಯಕ್ಷರು, ಗೆಜ್ಜಲಗೆರೆ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ಇವರ ಪತ್ರ ಸಂಖ್ಯೆ: ಉಕಾ2:ಪಾಶಾ:ಸಿ1:ಸಿಆರ್:137/2017-18, ದಿನಾಂಕ: 25.06.2018.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ685:ಗ್ರಾಪಂಅ:2018, ದಿನಾಂಕ:06.08.2018 ರ ಕಾರಣ ಕೇಳುವ ನೋಟಿಸ್.
3. ಶ್ರೀಮತಿ ಪ್ರೇಮ ಅಧ್ಯಕ್ಷರು, ಗೆಜ್ಜಲಗೆರೆ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 21.08.2018.
4. ಇದೇ ಸಮಸಂಖ್ಯೆಯ ವಿಚಾರಣಾ ನೋಟೀಸಿನ ದಿನಾಂಕ: 18.09.2018 ಮತ್ತು 20.09.2018 ವಿಚಾರಣೆ ನಡೆದ ದಿನಾಂಕ: 19.09.2018 ಮತ್ತು 06.10.2018

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಶ್ರೀಮತಿ ಪ್ರೇಮ ಇವರು ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಗ್ರಾಮ ಪಂಚಾಯಿತಿಯಲ್ಲಿ 16 ಮಕ್ಕಳಿಗೆ ವಾಸ ಮತ್ತು ದೂರ ಧೃಡೀರಣ ಪತ್ರಗಳನ್ನು ದಿನಾಂಕ:16.08.2017ರ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡು ನೀಡಿರುತ್ತಾರೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ನೀಡಿರುವ ವರದಿಯಲ್ಲಿ ಕಂಡು ಬಂದಿದ್ದು, ಅಧಿಕಾರ ವ್ಯಾಪ್ತಿ ಮಿರಿ ವಾಸ ಸ್ಥಳದ ಮತ್ತು ದೂರದ ಧೃಡೀಕರಣ ಪತ್ರ ನೀಡಿರುವುದು ನಿಯಮಬಾಹಿರವಾಗಿರುತ್ತದೆಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ: 06.08.2018 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

- ಗೆಜ್ಜಲಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರು ಒಟ್ಟಾಗಿ ಬಂದು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತಾಲ್ಲೂಕು ಕಛೇರಿ, ತಹಶೀಲ್ದಾರ್ ರವರಿಂದ ವಾಸ ಸ್ಥಳ ಮತ್ತು ದೂರ ಧೃಢೀಕರಣ ಪತ್ರ ಪಡೆಯಲು ತಡವಾಗುತ್ತಿದೆಯೆಂದು ಹೇಳಿ, ಪಂಚಾಯಿತಿಗೆ ತಮ್ಮನ್ನು ಪ್ರತಿನಿಧಿಸುತ್ತಿರುವುದರಿಂದ ಮಕ್ಕಳಿಗೆ ವಾಸ ಸ್ಥಳ ಮತ್ತು ದೂರ ಧೃಢೀಕರಣ ಪತ್ರವನ್ನು ನೀಡುವಂತೆ ಪಂಚಾಯಿತಿಗೆ ಬಂದು ಅರ್ಜಿ ಸಲ್ಲಿಸಿ ಆಡಳಿತ ಮಂಡಳಿಯವರ ಗಮನಕ್ಕೆ ತಂದು, ಆಡಳಿತ ಮಂಡಳಿಯವರನ್ನು ಒತ್ತಾಯಿಸಿರುವ ಮೇರೆಗೆ, ವಾಸ ಸ್ಥಳ ಮತ್ತು ದೂರ ಧೃಢೀಕರಣ ಪತ್ರವನ್ನು ಗ್ರಾಮದ ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಗಾಗಿ ನೀಡಿರುತ್ತೇನೆ.
- ದಿನಾಂಕ:16.08.2017 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗಿ, ಗ್ರಾಮ ಪಂಚಾಯಿತಿಯಲ್ಲಿ ವಾಸ ಮತ್ತು ದೂರು ಧೃಢೀಕರಣ ಪತ್ರ ನೀಡುತ್ತಿಲ್ಲದಿರುವುದು ಎಲ್ಲರೂ ತಿಳಿದ ವಿಷಯವಾಗಿರುತ್ತದೆ. ಆದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪೋಷಕರು ತಮ್ಮ ಮಕ್ಕಳನ್ನು ದೂರದ ಪಟ್ಟಣಗಳಲ್ಲಿ ವ್ಯಾಸಂಗಕ್ಕಾಗಿ ಶಾಲಾ ಕಾಲೇಜುಗಳಿಗೆ ಸೇರಿಸಿದ್ದು, ತಾಲ್ಲೂಕು ಕಛೇರಿಯಲ್ಲಿ ವಾಸ ಧೃಢೀಕರಣ ಪಡೆಯಲು ವಿಳಂಬವಾಗುತ್ತಿರುವುದರಿಂದ ಮಾನವೀಯತೆ ದೃಷ್ಟಿಯಿಂದ ವಾಸ ಮತ್ತು ದೂರ ಧೃಢೀಕರಣ ಪತ್ರ ನೀಡುತ್ತಿರುವುದರಲ್ಲಿ ಯಾವುದೇ ನಿಯಮಾಬಾಹಿರವಾಗಿರುವುದಿಲ್ಲವೆಂದು ಸಭೆಯು ನಿರ್ಣಯಿಸಿದ್ದರಿಂದ ಈ ರೀತಿ ಧೃಢೀಕರಣ ಪತ್ರ ನೀಡಲಾಯಿತು. ಅಧ್ಯಕ್ಷೆಯಾಗಿ ಸ್ವ-ಇಚ್ಛೆಯಿಂದ ಸ್ವೇಚ್ಛಾವರ್ತನೆಯಿಂದ, ಸ್ವಹಿತಕ್ಕಾಗಿ, ಅಧಿಕಾರ ಚಲಾಯಿಸಿ ಈ ರೀತಿ ಪತ್ರ ನೀಡಲಿಲ್ಲ, ಸಾರ್ವಜನಿಕ ಹಿತವಷ್ಟೇ ಇದರಲ್ಲಿ ಮುಖ್ಯವಾಗಿತ್ತು. ಮಕ್ಕಳ ಹಕ್ಕುಗಳ ಹೋರಾಟಗಾರರ ಸಲಹೆಯನ್ನು ಈ ನಿಟ್ಟಿಯನಲ್ಲಿ ಪಡೆಯಲಾಗಿತ್ತು. ಸರ್ಕಾರದಿಂದ ಬರುವ ಸುತ್ತೋಲೆಗಳ ಕಡತ ಪರಿಶೀಲಿಸಿದಾಗ ಅಲ್ಲಿ ಸರ್ಕಾರದಿಂದ ನಮ್ಮ ಪಂಚಾಯಿತಿಗೆ ಆಗಲಿ ಅಥವಾ ನೆರೆಯ ಇತರ ಪಂಚಾಯಿತಿಗಳಿಗಾಗಲಿ ಈ ರೀತಿ ವಾಸ ಧೃಢೀಕರಣ ಮತ್ತು ದೂರ ಧೃಢೀಕರಣ ಪತ್ರ ನೀಡದಂತೆ ಸರ್ಕಾರವು ಆದೇಶಿಸಿರುವ ಯಾವುದೇ ಸುತ್ತೋಲೆಗಳು ಆ ಸಂದರ್ಭದಲ್ಲಿ ಇಲ್ಲದಿರುವುದನ್ನು ಮಾಹಿತಿ ಪಡೆದು ಸರ್ವ ಸದಸ್ಯರ ಸಭೆ ಮನಗಂಡೇ, ಪ್ರಶ್ನಿತ ನಿರ್ಣಯ ಕೈಗೊಂಡು ವಾಸ್ತವ್ಯವನ್ನು ಧೃಢೀಕರಿಸಲಾಗಿದೆ.
- ಗ್ರಾಮ ಪಂಚಾಯಿತಿ ನಿರ್ಣಯವನ್ನು ವಿವಾದಿಸಿ ಮೂಗರ್ಜಿ ನೀಡಲಾಗಿದೆ ಎಂದು ತಿಳಿದ ಮೇಲೆ ಮತ್ತಾವುದೇ ಧೃಢೀಕರಣ ಪತ್ರ ಇತ್ತೀಚಿನ ದಿನಗಳಲ್ಲಿ ನೀಡುವುದನ್ನು ನಿಲ್ಲಿಸಲಾಗಿದೆ. ತಮ್ಮ ಆದೇಶ ಅನುಸರಿಸಿ ಈ ಕುರಿತು ಮುಂದಿನ ಹೆಜ್ಜೆ ಇಡಲಾಗುವುದು ಎಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಮಾನ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:19.09.2018 ರಂದು ನಡೆದ ವಿಚಾರಣೆಯಲ್ಲಿ ಸಾಮಾನ್ಯ ಸಭೆಯಲ್ಲಿ ವಾಸಸ್ಥಳ ದೃಢೀಕರಣ ಪತ್ರ ನೀಡುವ ಬಗ್ಗೆ ವಿಷಯ ಸೂಚಿಯಲ್ಲಿ ಸೇರಿಸಿರುವುದನ್ನು ಗಮನಿಸಲಾಯಿತು. ವಿಷಯ ಸೂಚಿಯನ್ನು ತಯಾರು ಮಾಡುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರದೆ ಇರುವ ವಿಷಯವನ್ನು ವಿಷಯ ಸೂಚಿಯಲ್ಲಿ ಸೇರ್ಪಡೆಗೊಳಿಸಿ, ಸಾಮಾನ್ಯ ಸಭೆಯಲ್ಲಿ ಮಂಡಿಸಲು ಕಾರಣ ಕರ್ತರಾಗಿ ಕರ್ತವ್ಯಲೋಪವೆಸಗಿರುತ್ತಾರೆ. ಈ ದಿಸೆಯಲ್ಲಿ ಸದರಿ ಪ್ರಕರಣದಲ್ಲಿ ಅವರು ಸಹ ಭಾಗಿಯಾಗಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ಮುಂದಿನ ವಿಚಾರಣೆಗೆ ಸದರಿ ಅವಧಿಯಲ್ಲಿ ಕಾರ್ಯನಿರ್ವಾಹಿಸುತ್ತಿದ್ದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರನ್ನು ಹಾಜರಾಗುವಂತೆ ತಿಳಿಸಿ ಪ್ರಕರಣದ ವಿಚಾರಣೆಯನ್ನು ದಿನಾಂಕ:06.10.2018ಕ್ಕೆ ಮುಂದೂಡಿ ಆದೇಶಿಸಿರುತ್ತಾರೆ. ದಿನಾಂಕ:06.10.2018 ರಂದು ನಡೆದ ವಿಚಾರಣೆಯಲ್ಲಿ ಅಧಿಕಾರ ವ್ಯಾಪ್ತಿ ಮೀರಿ 16 ಮಕ್ಕಳಿಗೆ ವಾಸ ಮತ್ತು ದೂರ ಧೃಡೀಕರಣ ಪತ್ರಗಳನ್ನು ನೀಡಿರುವುದು ನಿಯಮಬಾಹಿರವಾಗಿರುತ್ತದೆ. ಸದರಿ ವಿಷಯವನ್ನು ಸಭೆಗೆ ತರುವ ಜವಾಬ್ದಾರಿಯು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯದ್ದಾಗಿದೆ. ಈ ದಿಸೆಯನ್ನು ಶ್ರೀ ಬಾಲಾಜಿ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ವಿಫಲಾಗಿರುತ್ತಾರೆ. ಆದ್ದುದರಿಂದ ಶ್ರೀ ಬಾಲಾಜಿ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಆದೇಶಿಸಿರುತ್ತಾರೆ.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಮತ್ತು ಮೌಖಿಕ ಹೇಳಿಕೆಗಳನ್ನು ಪರಿಶೀಲಿಸಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಸಿದ್ಧಪಡಿಸುವ ವಿಷಯ ಸೂಚಿಯನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸುವ ಅಧಿಕಾರ ಅಧ್ಯಕ್ಷರದ್ದಾಗಿರುತ್ತದೆ. ಶ್ರೀಮತಿ ಪ್ರೇಮ, ಅಧ್ಯಕ್ಷರು, ಗೆಜ್ಜಲಗೆರೆ ಗ್ರಾಮ ಪಂಚಾಯತಿ ರವರುಗಳು ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ವಾಸ ಮತ್ತು ದೂರ ಧೃಡೀಕರಣ ಪತ್ರಗಳನ್ನು ನೀಡಿರುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗದಿರುವುದನ್ನು ಗಮನಿಸಿ, ಶ್ರೀ ಬಾಲಾಜಿ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀಮತಿ ಪ್ರೇಮ ಅಧ್ಯಕ್ಷರು, ಗೆಜ್ಜಲಗೆರೆ ಗ್ರಾಮ ಪಂಚಾಯಿತಿ ರವರಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಅನ್ವಯ ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಗೆ ಬರದೆ ಇರುವ ವಿಷಯವನ್ನು ವಿಷಯ ಸೂಚಿಯಲ್ಲಿ ಸೇರಿಸದಂತೆ ಹಾಗೂ ಇಂತಹ ಪ್ರಕರಣಗಳು ಮತ್ತೊಮ್ಮೆ ಮರುಕಳಿಸದಂತೆ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 685 ಗ್ರಾಪಂಅ 2018, ಬೆಂಗಳೂರು, ದಿನಾಂಕ:07.12.2018.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಶ್ರೀ ಬಾಲಾಜಿ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗೆಜ್ಜಲಗೆರೆ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮಂಡ್ಯ ರವರಿಗೆ ಆದೇಶಿಸಿದೆ ಮತ್ತು ಶ್ರೀಮತಿ ಪ್ರೇಮ ಅಧ್ಯಕ್ಷರು, ಗೆಜ್ಜಲಗೆರೆ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ರವರು ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ವಾಸ ಮತ್ತು ದೂರ ಧೃಡೀಕರಣ ಪತ್ರಗಳನ್ನು ನೀಡಿರುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗದಿರುವುದನ್ನು ಗಮನಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 48(4)ರನ್ವಯ ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಗೆ ಬರದೆ ಇರುವ ವಿಷಯಗಳನ್ನು ಗ್ರಾಮ ಸಭೆಗಳಲ್ಲಿ ಮಂಡಿಸದಂತೆ ಹಾಗೂ ಇಂತಹ ಪ್ರಕರಣಗಳು ಮತ್ತೊಮ್ಮೆ ಮರುಕಳಿಸದಂತೆ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

7/12

(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಮಂಡ್ಯ ಜಿಲ್ಲಾ ಪಂಚಾಯಿತಿ, ಮಂಡ್ಯ ಜಿಲ್ಲೆ.
2) ಕಾರ್ಯನಿರ್ವಾಹಕಾಧಿಕಾರಿ, ಮದ್ದೂರು ತಾಲ್ಲೂಕು ಪಂಚಾಯಿತಿ, ಮಂಡ್ಯ ಜಿಲ್ಲೆ.
3) ಶ್ರೀಮತಿ ಪ್ರೇಮ ಅಧ್ಯಕ್ಷರು, ಗೆಜ್ಜಲಗೆರೆ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ,
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗೆಜ್ಜಲಗೆರೆ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ,
5) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು(ಪಂ.ರಾಜ್-1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.